# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 818(907) |
| ಮಾನ್ಯ ಸದಸ್ಯರ ಹೆಸರು | ಶ್ರೀ ಪ್ರಕಾಶ್ ಕೆ. ರಾಥೋಡ್ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | 24/02/2022 |
| ಉತ್ತರಿಸುವ ಸಚಿವರು | ಮಾನ್ಯ ಕಾರ್ಮಿಕ ಸಚಿವರು |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ವಿಜಯಪುರ ಜಿಲ್ಲೆಯಲ್ಲಿ ಅಸಂಘಟಿತ ಕಾರ್ಮಿಕರಿಗೆ ಕಳೆದ 3 ವರ್ಷಗಳಿಂದ ಯಾವ ಯಾವ ಯೋಜನೆಯಡಿ ಹಣ ಬಿಡುಗಡೆ ಮಾಡಲಾಗಿದೆ. | ಕಾರ್ಮಿಕ ಇಲಾಖೆಯ ಅಧೀನದಲ್ಲಿ ಬರುವ ಮಂಡಳಿಗಳಲ್ಲಿ ಕಾರ್ಮಿಕರನ್ನು ನೋಂದಣಿ ಮಾಡಿಕೊಂಡು ವಿವಿಧ ಸೌಲಭ್ಯಗಳನ್ನು ನೀಡಲಾಗುತ್ತಿದ್ದು, ಕಳೆದ 3 ವರ್ಷಗಳಿಂದ ನೀಡಿರುವ ಸೌಲಭ್ಯಗಳ ವಿವರಗಳು ಈ ಕೆಳಗಿನಂತಿದೆ.<br><br>**<u>ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ:-</u>**<br>ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ವತಿಯಿಂದ ವಿಜಯಪುರ ಜಿಲ್ಲೆಯ ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗೆ ಕಳೆದ ಮೂರು ವರ್ಷದಲ್ಲಿ ವಿವಿಧ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ ಸೌಲಭ್ಯಗಳಡಿ 6,443 ಫಲಾನುಭವಿಗಳಿಗೆ ರೂ. 11,94,78,443/- ಗಳಷ್ಟು ಸಹಾಯಧನ ಬಿಡುಗಡೆ ಮಾಡಲಾಗಿದೆ. ವಿವರವನ್ನು **<u>ಅನುಬಂಧದಲ್ಲಿ</u>** ನೀಡಲಾಗಿದೆ.<br><br>**<u>ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ:</u>**<br>ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯು, ಅಸಂಘಟಿತ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಒದಗಿಸುವ ಉದ್ದೇಶದಿಂದ ಜಾರಿಗೊಳಿಸುತ್ತಿರುವ ಯೋಜನೆಗಳಡಿ ಜಿಲ್ಲಾವಾರು ಪ್ರತ್ಯೇಕ ಅನುದಾನ ಹಂಚಿಕೆಯಾಗಿರುವುದಿಲ್ಲ.<br><br>ಆದರೆ, ಅಸಂಘಟಿತ ಕಾರ್ಮಿಕರ ಅಭಿವೃದ್ಧಿಗಾಗಿ ಕಳೆದ ಮೂರು ವರ್ಷಗಳಲ್ಲಿ ವಿಜಯಪುರ ಜಿಲ್ಲೆಗೆ ಸಂಬಂಧಿಸಿದಂತೆ, ಈ ಮಂಡಳಿಯ ವತಿಯಿಂದ ಜಾರಿಗೊಳಿಸುತ್ತಿರುವ ಯೋಜನೆಗಳಡಿ ಸೌಲಭ್ಯ ವಿತರಿಸಿದ ವಿವರ ಈ ಕೆಳಗಿನಂತಿದೆ. |

1. **ಕರ್ನಾಟಕ ರಾಜ್ಯ ಖಾಸಗಿ ವಾಣಿಜ್ಯ ಸಾರಿಗೆ ಕಾರ್ಮಿಕರ ಅಪಘಾತ ಪರಿಹಾರ ಯೋಜನೆ:-**

| ಸೌಲಭ್ಯ | 2019-20 | | 2020-21 | | 2021-22 | |
|---|---|---|---|---|---|---|
| | ಪ್ರಕರಣ ಗಳ ಸಂಖ್ಯೆ | ಮೊತ್ತ | ಪ್ರಕರಣಗ ಳ ಸಂಖ್ಯೆ | ಮೊತ್ತ | ಪ್ರಕರಣ ಗಳ ಸಂಖ್ಯೆ | ಮೊತ್ತ |
| ಅಪಘಾತ ಪರಿಹಾರ | 1 | 500000 | 12 | 6000000 | 7 | 3500000 |
| ಶೈಕ್ಷಣಿಕ ಧನಸಹಾಯ | - | - | - | - | 4 | 40000 |

2. **ಕೋವಿಡ್-19ರ ವಿಶೇಷ ಪ್ಯಾಕೇಜ್:-**

| ವಿವರ | 2020-21 | | 2021-22 | |
|---|---|---|---|---|
| | ಕಾರ್ಮಿಕ ರ ಸಂಖ್ಯೆ | ನೆರವಿನ ಮೊತ್ತ | ಕಾರ್ಮಿಕ ರ ಸಂಖ್ಯೆ | ನೆರವಿನ ಮೊತ್ತ |
| ಮೊದಲನೇ ಅಲೆ (ತಲಾ ರೂ.5000ಗಳ ನೆರವು) | 3854 | 19270000 | - | - |
| ಎರಡನೇ ಅಲೆ (ತಲಾ ರೂ.2000ಗಳ ನೆರವು) | - | - | 24994 | 49988000 |

ಆ) ಎಷ್ಟು ಜನ ಕಾರ್ಮಿಕರಿಗೆ ಅಪಘಾತದ ಸೌಲಭ್ಯ ನೀಡಲಾಗಿದೆ

**ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ:-**

ಕಳೆದ ಮೂರು ವರ್ಷದಲ್ಲಿ ಅಪಘಾತ ಮರಣ/ದುರ್ಬಲಗ್ಗಿ ಪರಿಹಾರ ಸೌಲಭ್ಯದಡಿ 31 ಫಲಾನುಭವಿಗಳಿಗೆ ರೂ. 98,46,000/- ಗಳಷ್ಟು ಸಹಾಯಧನ ವಿತರಿಸಲಾಗಿದೆ.

**ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ:**

ಮಂಡಳಿಯು ಜಾರಿಗೊಳಿಸುತ್ತಿರುವ ಕರ್ನಾಟಕ ರಾಜ್ಯ ಖಾಸಗಿ ವಾಣಿಜ್ಯ ಸಾರಿಗೆ ಕಾರ್ಮಿಕರ ಅಪಘಾತ ಪರಿಹಾರ ಯೋಜನೆಯಡಿ ಕಳೆದ 3 ವರ್ಷಗಳಲ್ಲಿ ಒಟ್ಟು 20 ಅಪಘಾತ ಪ್ರಕರಣಗಳಿಗೆ ಸಂಬಂಧಿಸಿದಂತೆ ರೂ.1.00 ಕೋಟಿ ಅಪಘಾತ ಪರಿಹಾರ ಸೌಲಭ್ಯ ವಿತರಿಸಲಾಗಿದೆ.

ಇ) ಅಂಬೇಡ್ಕರ್ ಕಾರ್ಮಿಕರ ಸಹಾಯ ಹಸ್ತ ಯೋಜನೆಯ್ಲಲ್ಲಿ ಎಷ್ಟು ಫಲಾನುಭವಿಗಳಿದ್ದಾರೆ

**ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ:**

(1) **ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆ:-**

ಈ ಯೋಜನೆಯಡಿ 11 ಅಸಂಘಟಿತ ವರ್ಗಗಳಾದ "ಹಮಾಲರು, ಮನೆಗೆಲಸದವರು, ಚಿಂದಿ ಆಯುವವರು, ಟೈಲರ್ಸ್, ಮೆಕ್ಯಾನಿಕ್, ಅಗಸರು, ಅಕ್ಕಸಾಲಿಗರು, ಕಮ್ಮಾರರು, ಕುಂಬಾರರು, ಕ್ಷೌರಿಕರು ಹಾಗೂ ಭಟ್ಟಿಕಾರ್ಮಿಕ"ರನ್ನು ನೋಂದಾಯಿಸಿ ಸ್ಮಾರ್ಟ್‌ಕಾರ್ಡ್ ವಿತರಿಸಲಾಗುತ್ತಿದೆ. ವಿಜಯಪುರ ಜಿಲ್ಲೆಯಲ್ಲಿ ಈ ಯೋಜನೆಯಡಿ ಮೇಲ್ಕಂಡ ವರ್ಗಗಳ ಒಟ್ಟು 4609 ಕಾರ್ಮಿಕರನ್ನು ನೋಂದಣಿ ಮಾಡಲಾಗಿದೆ. ಆದರೆ ಪ್ರಸ್ತುತ ಯಾವುದೇ ಆರ್ಥಿಕ ಸೌಲಭ್ಯಗಳನ್ನು ನೀಡಲಾಗುತ್ತಿಲ್ಲ.

| | | |
|---|---|---|
| ಈ) | ಎನ್.ಪಿ.ಎಸ್. ಸ್ಕೀಮ್ ಅಡಿಯಲ್ಲಿ ಎಷ್ಟು ಜನ ನೋಂದಾಯಿಸಿಕೊಂಡಿದ್ದಾರೆ ; ಹಾಗೂ ಇವರುಗಳಿಗೆ ನೀಡುತ್ತಿರುವ. ಪಿಂಚಣಿ ಸೌಲಭ್ಯ ಎಷ್ಟು? (ವಿವರ ನೀಡುವುದು) | **ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ:**<br>**ಎನ್.ಪಿ.ಎಸ್ ಲೈಟ್ ಸ್ವಾವಲಂಭನ್ ಯೋಜನೆ:-**<br>ಈ ಯೋಜನೆಯಡಿ ಮಂಡಳಿಯ ಮೂಲಕ ವಿಜಯಪುರ ಜಿಲ್ಲೆಯಲ್ಲಿ 698 ಅಸಂಘಟಿತ ಕಾರ್ಮಿಕರು ಫಲಾನುಭವಿಯಾಗಿ ನೋಂದಾಯಿಸಿಕೊಂಡಿರುತ್ತಾರೆ.<br>ಯೋಜನೆಯನ್ನು ನಿಯಂತ್ರಿಸುವ ಕೇಂದ್ರ ಸರ್ಕಾರದ ಅಧೀನದ ಪಿ.ಎಫ್.ಆರ್.ಡಿ.ಎ. ಸಂಸ್ಥೆಯ ಮಾರ್ಗಸೂಚಿಗಳನ್ವಯ, ಯೋಜನೆಯಡಿ ನೋಂದಾಯಿತ ಫಲಾನುಭವಿಗಳು 60ವರ್ಷ ಪೂರೈಸುವವರೆಗೆ ವಾರ್ಷಿಕ ವಂತಿಕೆಯನ್ನು ಪಾವತಿಸಬೇಕಾಗಿದ್ದು, ಅವರ ಪ್ರಾನ್ ಖಾತೆಯಲ್ಲಿ ರೂ.1.00ಕ್ಕೂ ಮೇಲ್ಪಟ್ಟ ಮೊತ್ತ ಕ್ರೋಢೀಕರಣವಾದಲ್ಲಿ, ಮಾಸಿಕ ಪಿಂಚಣಿಯನ್ನು ಪಡೆಯಲು ಅರ್ಹನಾಗಿದ್ದು, ಈವರೆಗೆ ಅಂತಹ ಯಾವುದೇ ಪ್ರಕರಣಗಳು ದಾಖಲಾಗಿರುವುದಿಲ್ಲ ಆದ್ದರಿಂದ ಈ ಯೋಜನೆಯಡಿ ನೋಂದಾಯಿತ ಫಲಾನುಭವಿಗಳು ಪಡೆಯಬಹುದಾದ ಮಾಸಿಕ ಪಿಂಚಣಿಯ ನಿಖರತೆ ಲಭ್ಯವಿರುವುದಿಲ್ಲ. ಫಲಾನುಭವಿಯ ಪ್ರಾನ್ ಖಾತೆಯಲ್ಲಿ ರೂ. 1.00 ಲಕ್ಷಕಿಂತ ಕಡಿಮೆ ಮೊತ್ತವು ಕ್ರೋಢೀಕರಣವಾದಲ್ಲಿ ಸಂಪೂರ್ಣ ಮೊತ್ತವನ್ನು ಫಲಾನುಭವಿಯು ಪಡೆಯಬಹುದಾಗಿದೆ. |

ಕಾಇ 119 ಎಲ್ಇಟಿ 2022

(ಅರಬ್ಬೈಲ್ ಶಿವರಾಂ ಹೆಬ್ಬಾರ್)
ಕಾರ್ಮಿಕ ಸಚಿವರು

# ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ

## ಅನುಬಂಧ

| ಕಳೆದ 03 ವರ್ಷದಲ್ಲಿ ವಿಜಯಪುರಜಿಲ್ಲೆಯ ನೋಂದಾಯಿತಕಟ್ಟಡ ಮತ್ತುಇತರೆ ನಿರ್ಮಾಣಕಾರ್ಮಿಕರಿಗೆ ಮಂಡಳಿಯ ವತಿಯಿಂದ ವಿವಿಧ ಸೌಲಭ್ಯಗಳಡಿ ಸಹಾಯಧನಬಿಡುಗಡೆ ಮಾಡಿರುವವಿವರ | | | | | | | | | | | | | | | | | | | |
|---|---|---|---|---|---|---|---|---|---|---|---|---|---|---|---|---|---|---|---|
| ವರ್ಷ | ಶೈಕ್ಷಣಿಕ ಸಹಾಯಧನ | | ಮದುವೆ ಸಹಾಯಧನ | | ಪ್ರಮುಖ ವೈದ್ಯಕೀಯ ವೆಚ್ಚ ಸಹಾಯಧನ | | ಹೆರಿಗೆ ಸಹಾಯಧನ | | ಅಂತ್ಯ ಸಂಸ್ಕಾರ ವೆಚ್ಚ ಹಾಗೂ ಅನುಗ್ರಹರಾಶಿ ಸಹಾಯಧನ | | ಶಾಶ್ವತದುರ್ಬಲತೆ ಪಿಂಚಣಿ | | ಅಪಘಾತ ಮರಣ/ದುರ್ಬಲತೆ ಪರಿಹಾರ | | ನೋಂದಾಯಿತರಲ್ಲದಕಟ್ಟಡಕಾರ್ಮಿಕರ ಮರಣ ಪರಿಹಾರ ಸಹಾಯಧನ | | ಒಟ್ಟು ಸಂಖ್ಯೆ | ಒಟ್ಟು ಮೊತ್ತ |
| | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | | |
| 2018–19 | 2889 | 14918350 | 515 | 25592750 | – | – | 4 | 65000 | 185 | 10346650 | – | – | 8 | 3100000 | 1 | 100000 | 3602 | 54122750 |
| 2019–20 | 256 | 2371080 | 106 | 4990100 | 8 | 289971 | 13 | 310000 | 190 | 8312100 | – | – | 5 | 2500000 | 2 | 200000 | 580 | 18973251 |
| 2020–21 | 1492 | 10122000 | 341 | 8965000 | 10 | 234442 | – | – | 393 | 21195000 | 7 | 1620000 | 18 | 4246000 | – | – | 2261 | 46382442 |
| **ಒಟ್ಟು** | **4637** | **27411430** | **962** | **39547850** | **18** | **524413** | **17** | **375000** | **768** | **39853750** | **7** | **1620000** | **31** | **9846000** | **3** | **300000** | **6443** | **119478443** |